**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ:ಯೋ7/ವಿ.ಅ.ಯೋ./36(1)/2009-10 ದಿನಾಂಕ:.14.07.2010

**ಜ್ಞಾಪನ**

ವಿಷಯ: 2009-10ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಇಡಿ7 ಯೋಸಕ 2009 ಬೆಂಗಳೂರು ದಿ:13.08.2009 (ಇಡಿ 102 ಸ್ವೀಮಕ್ (ಯುನಿಕ)2009 ದಿ:13.02.2009.

2)ಈ ಕಛೇರಿ ಜ್ಞಾಪನಾ ಪತ್ರಸಂಖ್ಯೆ:ಯೋ7.ವಿ.ಅ.ಯೋ.ಕ.ರ.ಪ್ರೌ.ಶಾ/2009-10 ದಿ:01-09-2009.

3)ಸರ್ಕಾರಿ ಆದೇಶ ಸಂಖ್ಯೆ: ಇಡಿ 99 ಯೋಯೋಕ 2010 ದಿ:03.04.2010.

- - - - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-1ರ ಸರ್ಕಾರಿ ಆದೇಶದಲ್ಲಿ ಡಾ.ನಂಜುಂಡಪ್ಪ ವರದಿಯನ್ವಯ 2009-10ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶದ ಸರ್ಕಾರಿ ಪ್ರೌಢಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸಲು ರೂ. 1664.74 ಲಕ್ಷಗಳ ಅನುದಾನವನ್ನು ಒದಗಿಸಲಾಗಿತ್ತು.

ಸದರಿ ಅನುದಾನದಲ್ಲಿ 2009-10ನೇ ಸಾಲಿನಲ್ಲಿ ಮೊದಲ ಮತ್ತು ದ್ವಿತೀಯ ತ್ರೈಮಾಸಿಕ ಅನುದಾನ ರೂ.1040.69 ಲಕ್ಷಗಳನ್ನು 16 ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಬಾಕಿಯಿರುವ ರೂ.624.05 ಲಕ್ಷಗಳ ಅನುದಾನ ಬಿಡುಗಡೆ ಮಾಡಬೇಕಾಗಿದ್ದು, ಉಲ್ಲೇಖ 3ರ ಪತ್ರದಲ್ಲಿ ಆದೇಶಿಸಿರುವಂತೆ ಲೆಕ್ಕ ಶೀರ್ಷಿಕೆ: 2202-01-800-1-73-133 ರಡಿ ನಿಗಧಿಪಡಿಸಿರುವ ರೂ. 500.00 ಲಕ್ಷಗಳಲ್ಲಿ ರೂ. 125.00 ಲಕ್ಷಗಳ ಅನುದಾನವನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ಅನುದಾನ ಹಂಚಿಕೆಯನ್ನು ಈ ಜ್ಞಾಪನದೊಂದಿಗೆ ಅನುಬಂಧ-1ರಲ್ಲಿ ತಿಳಿಸಲಾಗಿದೆ.

ಸರ್ಕಾರದ ಆದೇಶದಲ್ಲಿ ಸೂಚಿಸಿರುವ ಹಾಗೂ ಈ ಕೆಳಕಂಡ ಷರತ್ತಿಗೊಳಪಟ್ಟು ಕಾರ್ಯಕ್ರಮವನ್ನು ನಿಯಮಾನುಸಾರ ಅನುಷ್ಠಾನಗೊಳಿಸಲು ತಿಳಿಸಿದೆ.

ಷರತ್ತುಗಳು:

1. ಸದರಿ ಅನುದಾನವನ್ನು ಸಂಬಂಧಿಸಿದ ಏಜೆನ್ಸಿಗಳ ಬ್ಯಾಂಕ್‌ಗಳ ಖಾತೆಗಳಿಗೆ ಇ.ಸಿ.ಎಸ್. ವಿಧಾನದ ಮೂಲಕ ನೇರವಾಗಿ ಜಿಲ್ಲಾ ಮಟ್ಟದಿಂದ ಈ ಆದೇಶ ತಲುಪಿದ ಐದು ದಿನಗೊಳಗಾಗಿ ಜಮಾ ಮಾಡತಕ್ಕದ್ದು. ಅಥವಾ ಕ್ರಮಸಂಖ್ಯೆ 3 ರಂತೆ
2. ಸದರಿ ಅನುದಾನವನ್ನು ಸಂಬಂಧಿಸಿದ ಏಜೆನ್ಸಿಗಳು ಆದೇಶದಲ್ಲಿ ನಿಗಧಿಪಡಿಸಿದ ಮೊತ್ತಗಳನ್ನು ಆಯಾ ಉದ್ದೇಶಗಳಿಗೆ ಖರೀದಿ ನಿಯಮಗಳನ್ನು ಪಾಲಿಸಿ ಬಳಕೆ ಮಾಡತಕ್ಕದ್ದು.
3. ಸಂಬಂಧಿಸಿದ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖಾ ಉಪನಿರ್ದೇಶಕರ ಮೇಲು ಸಹಿಯೊಂದಿಗೆ ಪತ್ರಾಂಕಿತ ಸಹಾಯಕರು ಹಣವನ್ನು ಸಿ.ಟಿ.ಎಸ್ 8 ರಲ್ಲಿ ಸೆಳೆದು ಏಜೆನ್ಸಿಗಳಿಗೆ ಪೇಯೀಸ್ ರಸೀದಿ ಮೂಲಕ ಬಿಡುಗಡೆ ಮಾಡಲು ಆದೇಶಿಸಿದೆ.
4. ಸದರಿ ಕಾರ್ಯಕ್ರಮವನ್ನು ಜಿಲ್ಲೆಗಳ ಮುಖ್ಯ ಯೋಜನಾಧಿಕಾರಿಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸತಕ್ಕದ್ದು.
5. ಒದಗಿಸಿರುವ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಖರ್ಚು ಭರಿಸಿ ಆರ್ಥಿಕ/ಭೌತಿಕ ಪ್ರಗತಿ ವರದಿಯನ್ನು ನೀಡುವುದು.

ನಿರ್ದೇಶಕರು (ಪ್ರೌಢಶಿಕ್ಷಣ)

ಗೆ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿಗಳ ಕಟ್ಟಡ ಬೆಂಗಳೂರು 560001.
2. ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ/ಧಾರವಾಡ.ಇವರಿಗೆ ಮಾಹಿತಿಗಾಗಿ ಮತ್ತು ಕಾರ್ಯಕ್ರಮದ ಆರ್ಥಿಕ ಮತ್ತು ಭೌತಿಕ ಪ್ರಗತಿ ಪರಿಶೀಲನೆಗಾಗಿ.
4. ಸಂಬಂಧಿಸಿದ ಜಿಲ್ಲಾ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್.
5. ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣಇಲಾಖೆ.
6. ಸಂಬಂಧಿಸಿದ ಜಿಲ್ಲಾ ಖಜಾನಾಧಿಕಾರಿಗಳು.
7. ಉಪನಿರ್ದೇಶಕರು ಎಂ.ಎನ್.ಸಿ ನಂ.45 ಖನಿಜಭವನ,ರೇಸ್ ಕೋರ್ಸ ರಸ್ತೆ ಬೆಂಗಳೂರು.
8. ಕಛೇರಿ ಪ್ರತಿ.

## ಅನುಬಂಧ-1

ಸರ್ಕಾರದ ಆದೇಶ ಸಂಖ್ಯೆ: ಇಡಿ 99 ಯೋಯೋಕ 2010, ಬೆಂಗಳೂರು ದಿ:03-04-2010 [ಇಡಿ 49 ಸ್ವೀಪುರ (ಯೂನಿಕ) 2010, ದಿ:03.04.2010] ರ ಪ್ರಕಾರ 2009-10ನೇ ಸಾಲಿನ ಡಾ.ನಂಜುಂಡಪ್ಪ ವರದಿಯನುಸಾರ ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶದ ಸರ್ಕಾರಿ ಪ್ರೌಢಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸಲು ಅನುದಾನ ಬಿಡುಗಡೆ ಕುರಿತು.

**ಲೆಕ್ಕಶೀರ್ಷಿಕೆ:2202-01-800-1-73-133 ರಡಿ ರೂ.125.00ಲಕ್ಷಗಳು**

| ಕ್ರ.ಸಂ | ಜಿಲ್ಲೆಯ ಹೆಸರು | ಜಿಲ್ಲಾವಾರು ಒದಗಿಸಿರುವ ಆಯವ್ಯಯ | ಈಗಾಗಲೇ ಬಿಡುಗಡೆಯಾದ 1 ಮತ್ತು 2ನೇ ತ್ರೈಮಾಸಿಕ ಅನುದಾನ | 2010-11ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ |
|---|---|---|---|---|
| 1 | ಚಾಮರಾಜನಗರ | 50.60 | 31.62 | 18.98 |
| 2 | ಚಿಕ್ಕಬಳ್ಳಾಪುರ | 25.30 | 15.81 | 9.49 |
| 3 | ಮಧುಗಿರಿ | 75.90 | 47.43 | 24.41 * |
| 4 | ಮೈಸೂರು | 40.48 | 25.30 | 15.18 |
| 5 | ರಾಮನಗರ | 50.60 | 31.62 | 18.98 |
| 6 | ತುಮಕೂರು | 20.24 | 12.65 | 7.59 |
| 7 | ಚಿತ್ರದುರ್ಗ | 25.30 | 15.81 | 9.49 |
| 8 | ಬಾಗಲಕೋಟೆ | 20.24 | 12.65 | 7.59 |
| 9 | ದಾವಣಗೆರೆ | 35.48 | 22.13 | 13.29 |
| | **ಒಟ್ಟು** | **344.08** | **215.02** | **125.00** |

- ಮಧುಗಿರಿ ಜಿಲ್ಲೆಯ ಬಾಕಿ ಅನುದಾನ ರೂ.28.47 ಲಕ್ಷಗಳಿದ್ದು, ಪ್ರಸ್ತುತ ರೂ.24.41 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಉಳಿದ ರೂ 4.06 ಲಕ್ಷಗಳನ್ನು ಮುಂದೆ ಬಿಡುಗಡೆ ಮಾಡಲಾಗುವುದು.

ನಿರ್ದೇಶಕರು (ಪ್ರೌಢಶಿಕ್ಷಣ)